

# ‘ಐರಾವತ’ ಮಾರುತ

ದರ್ಶನ್ ಮತ್ತೆ ಪೊಲೀಸ್ ಸಮವಸ್ತ್ರ ತೊಟ್ಟು ಅಭಿಮಾನಿಗಳ ಮುಂದೆ ನಿಂತಿದ್ದಾರೆ. ಈ ವರ್ಷದ ಬಹು ನಿರೀಕ್ಷೆಯ ಸಿನಿಮಾ ದರ್ಶನ್‌ರ ‘ಐರಾವತ’ ಅ. 1ರಂದು ತೆರೆಕಾಣುತ್ತಿದೆ. ‘ತುಂಬಾ ವಿಶೇಷಗಳೇನಿಲ್ಲ. ಆದರೆ, ನಮ್ಮ ಕೆಲಸ ಅಚ್ಚುಕಟ್ಟಾಗಿ ಮಾಡಿದ್ದೇವೆ. ನಿರ್ದೇಶಕ ಅರ್ಜುನ್ ಒಳ್ಳೆಯ ಸಿನಿಮಾ ಮಾಡಿದ್ದಾರೆ’ ಎಂದು ದರ್ಶನ್ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

‘ಐರಾವತ’ ಸಿನಿಮಾದ ಬಜೆಟ್ ಹೆಸರಿಗೆ ತಕ್ಕಂತಿದೆ. ಸಿನಿಮಾದ ನಾಮಕರಣ, ಮುಹೂರ್ತದಿಂದ ಹಿಡಿದು ತೆರೆ ಕಾಣಿಸುವವರೆಗೆ ನಿರ್ಮಾಪಕ ಸಂದೇಶ್ ನಾಗರಾಜ್ ದುಡ್ಡನ್ನು ನೀರಿನಂತೆ ಖರ್ಚು ಮಾಡಿದ್ದಾರೆ. ‘ಈ ಸಿನಿಮಾಕ್ಕೆ ಬೇಕಾದ ಎಲ್ಲವನ್ನೂ ನಿರ್ಮಾಪಕರಿಂದ ಹಟ ಮಾಡಿ ಪಡೆದು ಕೊಂಡಿರುವೆ’ ಎನ್ನುತ್ತಾರೆ ನಿರ್ದೇಶಕ ಅರ್ಜುನ್. ಊರ್ವಶಿ ರೌತೇಲ, ಪ್ರಕಾಶ್ ರೈ, ಅನಂತ್‌ನಾಗ್ ಅವರನ್ನು ಒಳಗೊಂಡಿರುವ ತಾರಾಗಣ ಕೂಡ ‘ವೈಟ್ ಎಲಿಫೆಂಟ್’ ಇಮೇಜಿಗೆ ಹೊಂದುವಂತಿದೆ. ಯೋಗರಾಜ ಭಟ್ ಸಾಹಿತ್ಯದ ಗೀತೆಗಳು ಜನಪ್ರಿಯವಾಗಿರುವುದು ಕೂಡ ಸಿನಿಮಾದ ಬಗ್ಗೆ ಚಿತ್ರರಸಿಕರ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ಅಂದ ಹಾಗೆ, ‘ಚಂದನವನ’ದಲ್ಲಿ ಮಳೆಯ ಹಂಗಾಮು ದುರ್ಬಲವಾಗಿದ್ದರೂ ನಿರ್ಮಾಪಕ ಸಂದೇಶ್ ಅವರಿಗೆ ಸುಗ್ಗಿ ಭರ್ಜರಿಯಾಗಿದೆಯಂತೆ. ‘ಸಿನಿಮಾ ತೆರೆ ಕಾಣುವ ಮೊದಲೇ ನಾವು ಸೇಫು’ ಎನ್ನುವುದು ನಿರ್ಮಾಪಕರ ಖುಷಿ. ಕರ್ನಾಟಕ ಮಾತ್ರವಲ್ಲದೆ ಹೊರರಾಜ್ಯಗಳಲ್ಲೂ ವಿದೇಶಗಳಲ್ಲೂ ಚಿತ್ರವನ್ನು ಒಟ್ಟಿಗೆ ತೆರೆ ಕಾಣಿಸುವ ಪ್ರಯತ್ನ ಕೂಡ ಅವರಿಗೆ ಲಾಭಕರವಾಗಿ ಪರಿಣಮಿಸಿದೆ.

ದರ್ಶನ್ ಹಾಗೂ ಅರ್ಜುನ್ ಅವರಿಗೆ ‘ಐರಾವತ’ ಗೆಲ್ಲಲೇಬೇಕಾದ ಸಿನಿಮಾ. ದರ್ಶನ್‌ರ ಹಿಂದಿನ ಸಿನಿಮಾಗಳಾದ ‘ಬೃಂದಾವನ’ ಹಾಗೂ ‘ಅಂಬರೀಶ’ ಸಿನಿಮಾಗಳು ಗಲ್ಲಾ ಪೆಟ್ಟಿಗೆಯಲ್ಲಿ ಸದ್ದು ಮಾಡಿದ್ದು ಅಷ್ಟಕ್ಕಷ್ಟೇ. ಅರ್ಜುನ್‌ರ ಹಿಂದಿನ ಸಿನಿಮಾ ‘ರಾಟೆ’ ಕೂಡ ಗೆದ್ದ ಚಿತ್ರಗಳ ಪಟ್ಟಿಯಲ್ಲಿಲ್ಲ. ಹಾಗಾಗಿ ‘ಐರಾವತ’ ಗೆದ್ದಲ್ಲಿ, ಆ ಗೆಲುವು ಇಬ್ಬರಿಗೂ ಶಕ್ತಿಮದ್ದಾಗಿ ಪರಿಣಮಿಸಲಿದೆ. ‘ಐರಾವತ’ದ ಶೂಟಿಂಗ್ ಸಂದರ್ಭದಲ್ಲಿ ದರ್ಶನ್ ಹಾಗೂ ಅರ್ಜುನ್ ಇಬ್ಬರ ನಡುವೆ ಜಗಳ ನಡೆಯಿತು ಎನ್ನುವ ಮಾತುಗಳಿವೆ. ಸಿನಿಮಾದ ಯಶಸ್ಸು ಗೆಳೆಯರ ಮೋರೆಯಲ್ಲಿ ನಗು ತರುವಂತೆಯೇ, ಟೀಕಾಕಾರರನ್ನು ಮೌನವಾಗಿಸಬಹುದು.

# ‘ಕಾಡು’ವ ಪಯಣ!

ಲಾಸ್ಟ್ ಬಸ್! ಇದು, ‘ಜುಗಾರಿ’ಯಂಥ ವಿಶಿಷ್ಟ ಸಿನಿಮಾದ ಮೂಲಕ ಸಹೃದಯರ ಗಮನಸೆಳೆದಿದ್ದ ನಿರ್ದೇಶಕ ಎಸ್.ಡಿ. ಅರವಿಂದ್ ಅವರ ಎರಡನೇ ಸಾಹಸ. ‘ಜುಗಾರಿ’ಯ ನಾಯಕ ಅವಿನಾಶ್ ಅವರೇ ‘ಲಾಸ್ಟ್ ಬಸ್’ ನಲ್ಲೂ ನಾಯಕ. ಈ ಇಬ್ಬರೂ ದಿವಂಗತ ನರಸಿಂಹರಾಜು ಅವರ ಮೊಮ್ಮಕ್ಕಳು ಎನ್ನುವುದು ವಿಶೇಷ. ನರಸಿಂಹರಾಜು ಪುತ್ರಿ ಸುಧಾ ನರಸಿಂಹರಾಜು ಹಾಗೂ ಅವರ ಕುಟುಂಬದ ಸಮರ್ಥ ನಟನಾಗಿ ಅಭಿನಯಿಸುವ ಮೂಲಕ ಈ ಚಿತ್ರಕ್ಕೊಂದು ಕೌಟುಂಬಿಕ ಆಯಾಮವೂ ದೊರೆತಿದೆ.

ಕಳೆದ ವಾರ ಗೀತೆಗಳ ಧ್ವನಿಮುದ್ರಿಕೆಯನ್ನು ಪೇಟೆಗೆ ಬಿಡುಗಡೆ ಮಾಡಿದ ‘ಲಾಸ್ಟ್ ಬಸ್’ ಬಳಗ, ಅಕ್ಟೋಬರ್ ಕೊನೆಯ ಭಾಗದಲ್ಲಿ ಚಿತ್ರವನ್ನು ತೆರೆ ಕಾಣಿಸುವ ಪ್ರಯತ್ನದಲ್ಲಿದೆ.

ಕೊನೆಯ ಬಸ್ಸಿನಲ್ಲಿ ಇರುವ ಆರು ಪ್ರಯಾಣಿಕರ ಕಥೆ ಚಿತ್ರದಲ್ಲಿದೆ. ನಿರ್ದಿಷ್ಟ ಗಮ್ಯದತ್ತ ಹೊರಟ ಪ್ರಯಾಣಿಕರು ಪರಿಸ್ಥಿತಿಯ ಕೈವಾಡದಿಂದಾಗಿ ಅಪರಿಚಿತ ದಾರಿಗಳಲ್ಲಿ ನಡೆಯುವುದು ಪ್ರೇಕ್ಷಕರನ್ನು ತುದಿ ಕುರ್ಚಿಯಲ್ಲಿ ಕೂರಿಸುವಂತಿದೆಯಂತೆ. ಇದು ಥ್ರಿಲ್ಲರ್ ಸಿನಿಮಾಗಳ ಸಾಲಿಗೆ ಸೇರಿದರೂ, ಸಾಮಾನ್ಯವಾಗಿ ಥ್ರಿಲ್ಲರ್ ಸಿನಿಮಾಗಳಲ್ಲಿ ಇರುವ ಕ್ಲೀಷೆಗಳನ್ನೆಲ್ಲ ‘ಲಾಸ್ಟ್ ಬಸ್’ ಮೀರಿದೆಯಂತೆ. ಮಲೆನಾಡನ್ನು, ಮಳೆನಾಡಿನ ಕಾಡನ್ನು ಚಿತ್ರದಲ್ಲಿ ಅದ್ಭುತವಾಗಿ ತೋರಿಸಲಾಗಿದೆಯಂತೆ.

■ ರಘು



ಅವಿನಾಶ್, ಅರವಿಂದ್ ಹಾಗೂ ಸಮರ್ಥ